23	ಬೆಳಗಾಂ	2754	325	–	3079
24	ಧಾರವಾಡ	1200	145	79	1424
25	ಬಿಜಾಪುರ	1577	131	–	1708
26	ಕಾರವಾರ	1822	426	234	2482
27	ಗದಗ	1151	58	–	1209
	ಒಟ್ಟು	**27966**	**4260**	**1556**	**33782**

ಆ) ಸದರಿ ಸಂಘಗಳಲ್ಲಿ ಒಟ್ಟು 662 ಯುವಕ ಸಂಘಗಳಿಗೆ ಸ್ವಂತ ಕಟ್ಟಡಗಳನ್ನು ಒದಗಿಸಿಕೊಡಲಾಗಿದೆ.

ಗ್ರಾಮೀಣ ಪ್ರದೇಶದ 7 ಪ್ರೌಢಶಾಲಾ ಹಾಗೂ ಪದವಿಪೂರ್ವ ಕಾಲೇಜುಗಳಿಗೆ 2004–05ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಅನುದಾನ ರೂ. 4,96,488/– ಮಂಜೂರಾಗಿರುತ್ತದೆ.

ಇ) ರಾಜ್ಯದಲ್ಲಿ 46 ಕೇಂದ್ರಗಳಲ್ಲಿ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ.(ಜಿಲ್ಲಾ ಕ್ರೀಡಾಂಗಣ –19, ತಾಲ್ಲೂಕು ಕ್ರೀಡಾಂಗಣ–27).

ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಕ್ರೀಡಾಂಗಣಗಳನ್ನು ಪೂರ್ಣಗೊಳಿಸಲು ಸ್ಥಳೀಯ ಕ್ರೀಡಾಂಗಣ ಸಮಿತಿಗಳು ಸಾರ್ವಜನಿಕ ವಂತಿಕೆ, ಶಾಸಕರ ನಿಧಿ, ಇತ್ಯಾದಿ ಮೂಲಕ ಸಾಕಷ್ಟು ಹಣವನ್ನು ಸಂಗ್ರಹಿಸಬೇಕಾಗಿದೆ. ಕೇಂದ್ರ ಸರ್ಕಾರದ ಹೊಂಥಾಣಿಕೆ ಅನುದಾನದ ಯೋಜನೆಯನ್ವಯ ಅನೇಕ ಕ್ರೀಡಾಂಗಣಗಳ ನಿರ್ಮಾಣಕ್ಕೆ ಸಹಾಯವನ್ನು ಪಡೆಯುತ್ತಿದ್ದು, ಜಿಲ್ಲಾ ಪಂಚಾಯತ್ ಆಯವ್ಯಯದಲ್ಲಿ ಕ್ರೀಡೆಗಾಗಿ ಶೇ. 2 ರಷ್ಟು ಹಣವನ್ನು ತಮ್ಮ ಆಯವ್ಯಯದಲ್ಲಿ ಮೀಸಲಿಡಲು ತೀರ್ಮಾನಿಸಲಾಗಿದೆ. ಸ್ಥಳೀಯ ಸಂಪನ್ಮೂಲಗಳಿಂದ ಕ್ರೋಢೀಕರಿಸಿ ತಮ್ಮ ಪಾಲಿನ ಜವಾಬ್ದಾರಿಯನ್ನು ನಿರ್ವಹಿಸಿ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದಾಗ ಕೇಂದ್ರ ಸರ್ಕಾರದ ಭಾಗದ ಹಣವನ್ನು ನೀಡಲಾಗುತ್ತಿದೆ. ಈ ಎಲ್ಲಾ ಮೂಲಗಳಿಂದ ಕ್ರೋಢೀಕರಿಸಿದ ಹಣದಿಂದ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಕ್ರೀಡಾಂಗಣಗಳ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಾಗುತ್ತಿದೆ.

ಈ) ಸ್ಥಳೀಯ ಸಂಸ್ಥೆಗಳು ತಮ್ಮ ಸಂಪನ್ಮೂಲದ ಸ್ವಲ್ಪ ಭಾಗವನ್ನು ಕ್ರೀಡಾ ಚಟುವಟಿಕೆಗೆ ಮೀಸಲಾಗಿಟ್ಟು ಹಣವನ್ನು ಜಿಲ್ಲಾ ಪಂಚಾಯತ್‌ಗೆ ನೀಡಬೇಕೆಂದು ಈಗಾಗಲೇ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

885(1153) ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ದೇವಸ್ಥಾನಗಳ ಆದಾಯದ ಹಣವನ್ನು ಸ್ಥಳೀಯ ಪ್ರದೇಶ ಅಭಿವೃದ್ಧಿ ಕಾರ್ಯಗಳಿಗೆ ಬಳಸಲು ಸರ್ಕಾರ ಅನುಮತಿಸಿದೆಯೇ;

ಆ) ಹೆಚ್ಚುವರಿ ಆದಾಯವನ್ನು ದೇವಸ್ಥಾನ ಪ್ರದೇಶದಲ್ಲಿರುವ ರಸ್ತೆ, ಚರಂಡಿ, ನೈರ್ಮಲ್ಯ ವ್ಯವಸ್ಥೆ ಮುಂತಾದ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಲು ಸರ್ಕಾರ ಮುಂದಾಗುವುದೇ;

ಇ) ದೇವಸ್ಥಾನಗಳ ಜೀರ್ಣೋದ್ಧಾರ ಇತ್ಯಾದಿ ಅಭಿವೃದ್ಧಿ ಕಾರ್ಯಗಳಿಗೆ ಕಳೆದ ಎರಡು ವರ್ಷಗಳಲ್ಲಿ ಸರ್ಕಾರದವರು ಮಂಜೂರು ಮಾಡಿದ ಅನುದಾನದ ಮೊತ್ತ ಮತ್ತು ಬಿಡುಗಡೆ ಮಾಡಿದ ಹಣದ ಮೊತ್ತ ಎಷ್ಟು;

ಈ) ದೇವಸ್ಥಾನಗಳಿಗೆ ಬಿಡುಗಡೆ ಮಾಡುತ್ತಿರುವ ಒಟ್ಟು ಅನುದಾನದ ಮೊತ್ತವನ್ನು ಹೆಚ್ಚು ಮಾಡುವ ಅಗತ್ಯತೆಯನ್ನು ಸರ್ಕಾರ ಮನಗಂಡಿದೆಯೇ;

ಉ) ಹೌದಾದಲ್ಲಿ, ಪ್ರಸಕ್ತ ಸಾಲಿನಲ್ಲಿ ಆ ಕುರಿತು ಕ್ರಮ ಜರುಗಿಸಲಾಗುವುದೇ?

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಮುಜರಾಯಿ ದೇವಾಲಯಗಳಲ್ಲಿ ಬರುವ ಆದಾಯವನ್ನು ಸ್ಥಳೀಯ ಅಭಿವೃದ್ಧಿ ಕಾರ್ಯಗಳಿಗೆ ಬಳಸಲು ಅವಕಾಶ ಇರುವುದಿಲ್ಲ.

ಆ) ಇಲ್ಲ.

ಇ) ಧಾರ್ಮಿಕ ಸಂಸ್ಥೆಗಳಿಗೆ ಕಳೆದ 2 ವರ್ಷಗಳಲ್ಲಿ ಅಭಿವೃದ್ಧಿ ಕಾರ್ಯಕ್ಕಾಗಿ ಬಿಡುಗಡೆ ಮಾಡಿದ ಅನುದಾನ ವಿವರ ಈ ಕೆಳಕಂಡಂತಿದೆ:–

ವರ್ಷ	ದುರಸ್ತಿ ಜೀರ್ಣೋದ್ಧಾರ (ರೂ.ಲಕ್ಷಗಳಲ್ಲಿ)	ನವೀಕರಣ	ಆರಾಧನಾ
2002–03	230.00	350.00	460.00
2003.04	110.00	110.00	120.00

ಈ) ಹೌದು.

ಉ) 2005–2006ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಹೆಚ್ಚಿಸಲು ಆರ್ಥಿಕ ಇಲಾಖೆಗೆ ಕೋರಿಕೆ ಸಲ್ಲಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು ದಿನಾಂಕ : 1–2–05

887(619) ಶ್ರೀ ಆಲ್ಕೋಡ್ ಹನುಮಂತಪ್ಪ (ದೇವದುರ್ಗ): ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಯಚೂರು ಜಿಲ್ಲೆ, ದೇವದುರ್ಗ ತಾಲ್ಲೂಕಿನ ಗೂಗಲ್ ಬ್ಯಾರೇಜ್ ಕಾಮಗಾರಿ ಯಾವ ವರ್ಷದಿಂದ ಪ್ರಾರಂಭವಾಗಿರುತ್ತದೆ;

ಆ) ಎಷ್ಟು ಮೊತ್ತಕ್ಕೆ ಹಾಗೂ ಯಾವ ವರ್ಷದಲ್ಲಿ ಕಾಮಗಾರಿ ಪೂರ್ಣಗೊಳಿಸಲು ಸರ್ಕಾರ ಮತ್ತು ಗುತ್ತಿಗೆದಾರರ ಮಧ್ಯೆ ಒಪ್ಪಂದವಾಗಿತ್ತು;

ಇ) ಬ್ಯಾರೇಜ್ ಕಾಮಗಾರಿ ಪೂರ್ಣಗೊಂಡಿದೆಯೇ;

ಈ) ಇಲ್ಲದಿದ್ದಲ್ಲಿ, ಕಾರಣವೇನು;

ಉ) ಇದಕ್ಕೆ ಗುತ್ತಿಗೆ ನೀಡಿದ ಹಣಕ್ಕಿಂತಲೂ ಹೆಚ್ಚುವರಿಯಾಗಿ ಹಣವನ್ನು ಗುತ್ತಿಗೆದಾರರಿಗೆ ನೀಡಿರುವುದು ನಿಜವೇ;

ಊ) ಹಾಗಿದ್ದಲ್ಲಿ, ಎಷ್ಟು ಹಣ ಹೆಚ್ಚುವರಿಯಾಗಿ ನೀಡಲಾಗಿದೆ;

ಋ) ಬ್ಯಾರೇಜ್ ಕಾಮಗಾರಿ ಮಂದಗತಿಯಲ್ಲಿ ನಡೆದಿರುವುದು ನಿಜವೇ;

ಋೂ) ಹಾಗಿದ್ದಲ್ಲಿ; ಇದನ್ನು ತೀವ್ರಗೊಳಿಸುವ ಪ್ರಯತ್ನ ಸರ್ಕಾರ ಮಾಡುತ್ತಿದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು) :

ಅ) ಗೂಗಲ್ ಬ್ಯಾರೇಜ್ ಕಾಮಗಾರಿ ನವೆಂಬರ್ 2002ರಲ್ಲಿ ಪ್ರಾರಂಭವಾಗಿರುತ್ತದೆ.